ಸಂಪುಟ : 8 ಸಂಚಿಕೆ : 241 ಪುಟ : 4 ಬೆಲೆ : 3.00 ಬುಧವಾರ ನವೆಂಬರ್ 01, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 241 Pages : 4 Price : 3.00 Wednesday November 01, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## 'ಕರ್ನಾಟಕ ಸಂಭ್ರಮ-50' । ಮದುಮಗಳನ್ನೂ ನಾಚಿಸುವಂತೆ ಸಿಂಗಾರಗೊಂಡ ಅವಳಿ ನಗರ

# ಐತಿಹಾಸಿಕ ಕಾರ್ಯಕ್ರಮಕ್ಕೆ ಕ್ಷಣಗಣನೆ







**■ ವಿಜಯಸಾಕ್ಷಿ ಸುದ್ದಿ, ಗದಗ**

ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣಗೊಂಡು 50 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಗದಗ ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಐತಿಹಾಸಿಕ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ ಪಾಟೀಲ ಅವರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ 50 ವರ್ಷಗಳ ಹಿಂದೆ ಜರುಗಿದ ಐತಿಹಾಸಿಕ ಕಾರ್ಯಕ್ರಮದ ಮರುಸೃಷ್ಟಿಗೆ ಜಿಲ್ಲಾಡಳಿತದಿಂದ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ಐವತ್ತು ವರ್ಷಗಳ ಹಿಂದೆ ಜರುಗಿದ ಕರ್ನಾಟಕ ನಾಮಕರಣ ಸಂಭ್ರಮೋತ್ಸವದ ಐತಿಹಾಸಿಕ ಕಾರ್ಯಕ್ರಮದ ಮರುಸೃಷ್ಟಿಯ ಕಾರ್ಯಕ್ರಮಕ್ಕೆ ಇಡೀ ಗದಗ-ಬೆಟಗೇರಿ ನಗರ ದೀಪಾಲಂಕಾರ ಹಾಗೂ ಚಿತ್ತಾರಗಳೊಂದಿಗೆ ಮದು ಮಗಳೇ ನಾಚುವಂತೆ ಸಿಂಗಾರಗೊಂಡಿದೆ. ಅವಳಿ ನಗರದ ವೃತ್ತಗಳು, ಬೀದಿಗಳು, ರಸ್ತೆಗಳು ಕನ್ನಡ ಬಾವುಟ ಹಾಗೂ ದೀಪಾಲಂಕರಗಳೊಂದಿಗೆ ಝಗಮಗಿಸುತ್ತಿರುವದನ್ನು ಕಂಡರೆ ವಿಶ್ವವಿಖ್ಯಾತ ಮೈಸೂರು ದಸರಾ ಹಬ್ಬದ ನೆನಪಾಗದಿರದು.

ಮೆರವಣಿಗೆ: ನವೆಂಬರ್ 3ರಂದು ಕನ್ನಡ ಜ್ಯೋತಿಯನ್ನು ಸ್ವೀಕರಿಸಿ ನಗರದ ವೀರನಾರಾಯಣನ ಸನ್ನಿಧಿಯಲ್ಲಿ ಪೂಜೆ ಸಲ್ಲಿಸಿ ನಾಡದೇವತೆ ತಾಯಿ ಭುವನೇಶ್ವರಿಗೆ ಪುಷ್ಪಾರ್ಚನೆ ಮೂಲಕ 'ಕರ್ನಾಟಕ ಸಂಭ್ರಮ-50'ರ ಮೆರವಣಿಗೆ ಪ್ರಾರಂಭಗೊಳ್ಳುವದು. ಮೆರವಣಿಗೆಯಲ್ಲಿ ರಾಜ್ಯ, ರಾಷ್ಟ್ರ ಮಟ್ಟದ ಹೆಸರಾಂತ ಸಾಂಸ್ಕೃತಿಕ ಕಲಾ ತಂಡಗಳು ಭಾಗವಹಿಸಿ ಮೆರವಣಿಗೆಯ ಮೆರುಗನ್ನು ಇನ್ನಷ್ಟು ಹೆಚ್ಚಿಸಲಿವೆ. ಮೆರವಣಿಗೆಯು ವೀರನಾರಾಯಣ ದೇವಸ್ಥಾನದಿಂದ ಪ್ರಾರಂಭವಾಗಿ ಜಾಮಿಯಾ ಮಸೀದಿ, ಬಸವೇಶ್ವರ ವೃತ್ತ, ಕೆ.ಎಚ್ ಪಾಟೀಲ ವೃತ್ತ, ಪಂ.ಪುಟ್ಟರಾಜ ಗವಾಯಿಗಳ ವೃತ್ತ, ಜನರಲ್ ಕಾರಿಯಪ್ಪ ವೃತ್ತದ ಮೂಲಕ ದಿ ಕಾಟನ್ ಸೇಲ್ ಸೊಸೈಟಿಗೆ ತಲುಪಲಿದೆ. ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಉಪಮುಖ್ಯಮಂತ್ರಿಗಳು, ಸಚಿವರು, ಶಾಸಕರು, ಜನಪ್ರತಿನಿಧಿಗಳು ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ. 50 ವರ್ಷಗಳ ಹಿಂದೆ ಅಂದಿನ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು ಅವರ ಸ್ಥಾನದಲ್ಲಿ ಸಿದ್ಧರಾಮಯ್ಯನವರು, ಕೆ.ಎಚ್ ಪಾಟೀಲ ಅವರ ಸ್ಥಾನದಲ್ಲಿ ಎಚ್.ಕೆ ಪಾಟೀಲ ಅವರನ್ನು ಕಣ್ತುಂಬಿಕೊಳ್ಳಲು ಇಡೀ ಜಿಲ್ಲೆಯ ಜನತೆ ಕುತೂಹಲದಿಂದ ಕಾಯುತ್ತಿದ್ದಾರೆ.

### ವೇದಿಕೆ ಕಾರ್ಯಕ್ರಮ

ಐವತ್ತು ವರ್ಷಗಳ ಹಿಂದೆ ಜರುಗಿದ ಕರ್ನಾಟಕ ನಾಮಕರಣ ಸಂಭ್ರಮೋತ್ಸವ ಕಾರ್ಯಕ್ರಮಕ್ಕೆ ಸಾಕ್ಷಿಯಾದ ಗದಗ ನಗರದ ದಿ ಕಾಟನಸೇಲ್ ಸೊಸೈಟಿ ಆವರಣ ನವೆಂಬರ್ 3ರಂದು ಜರುಗಲಿರುವ 'ಕರ್ನಾಟಕ ಸಂಭ್ರಮ-50'ರ ಕಾರ್ಯಕ್ರಮಕ್ಕೆ ಮತ್ತೊಮ್ಮೆ ಸಾಕ್ಷಿಯಾಗಲಿದೆ. ಸೊಸೈಟಿ ಆವರಣದಲ್ಲಿ ಜರುಗಲಿರುವ ಬೃಹತ್ ವೇದಿಕೆ ಕಾರ್ಯಕ್ರಮದಲ್ಲಿ ಕರ್ನಾಟಕ ನಾಮಕರಣ ಮಹೋತ್ಸವ ಪುಸ್ತಕ ಬಿಡುಗಡೆ, ಕರ್ನಾಟಕ ನಾಮಕರ್ಣ ಅಪರೂಪದ ಭಾವಚಿತ್ರಗಳ ಪ್ರದರ್ಶನ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಹತ್ತು ಜಿಲ್ಲೆಗಳ ಗ್ರಾಮಚರಿತೆ ಕೋಶ ಬಿಡುಗಡೆ, ಗದಗ ಜಿಲ್ಲೆಯ ಪ್ರವಾಸಿ ತಾಣಗಳ ಪರಿಚಯಾತ್ಮಕ ಪ್ರದರ್ಶನಗಳು ನಡೆಯಲಿವೆ.

## ಕರ್ನಾಟಕ ಸಂಭ್ರಮ-50 ಇಂದು ಸಾಂಸ್ಕೃತಿಕ ಕಾರ್ಯಕ್ರಮಗಳು





**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆಯಿಂದ ಮೈಸೂರು ರಾಜ್ಯಕ್ಕೆ ಕರ್ನಾಟಕ ನಾಮಕರಣ ಸುವರ್ಣ ಮಹೋತ್ಸವದ ಕರ್ನಾಟಕ ಸಂಭ್ರಮ-50 ಸಮಾರಂಭವನ್ನು ನವೆಂಬರ್ 1, 2 ಮತ್ತು 3ರಂದು ನಗರದ ದಿ. ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಆಚರಿಸಲಾಗುತ್ತಿದೆ.

ನವೆಂಬರ್ 1 ರಂದು ಸಂಜೆ 6 ಗಂಟೆಯಿಂದ ಗದುಗಿನ ಶಾಲಾ ಮಕ್ಕಳಿಂದ ನೃತ್ಯ ರೂಪಕ, ಝೀ ಕನ್ನಡ ಕಾಮಿಡಿ ಕಿಲಾಡಿಗಳು ಕಲಾವಿದರಾದ ಅಪ್ಪಣ್ಣ ರಾಮದುರ್ಗ, ವಾಣಿ, ಪ್ರವೀಣ ಗಸ್ತಿ ಅವರಿಂದ ಕಾರ್ಯಕ್ರಮ ಜರುಗಲಿದೆ.

ಝೀ ಕನ್ನಡ ಸರಿಗಮಪ ಕಲಾವಿದರಾದ ಶ್ರೀರಾಮ ಕಾಸರ, ಶರಧಿ ಪಾಟೀಲ, ಕಂಬದ ರಂಗಯ್ಯ, ದಿಯಾ ಹೆಗಡೆ ಅವರಿಂದ ಕನ್ನಡ ಚಿತ್ರಗೀತೆಗಳ ಕಾರ್ಯಕ್ರಮಗಳು ಹಾಗೂ ಸ್ಥಳೀಯ ಕಲಾವಿದರುಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

## ಮೈಸೂರು ರಾಜ್ಯಕ್ಕೆ ಕರ್ನಾಟಕ ನಾಮಕರಣದ 'ಸುವರ್ಣ ಮಹೋತ್ಸವ'

# ಮೂರು ದಿನಗಳ ಅದ್ದೂರಿ 'ಸುವರ್ಣ ಸಂಭ್ರಮ'

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆಯಿಂದ 'ಕರ್ನಾಟಕ ಸಂಭ್ರಮ-50' ಸಮಾರಂಭವನ್ನು ನವೆಂಬರ್ 1, 2 ಮತ್ತು 3ರಂದು ನಗರದ ದಿ ಕಾಟನ್ ಸೇಲ್ ಸೊಸೈಟಿ ಅವರಣದಲ್ಲಿ ಆಚರಿಸಲಾಗುತ್ತಿದೆ.

ನ.3ರಂದು ಬೆಳಿಗ್ಗೆ 9.30ಕ್ಕೆ ಶ್ರೀ ವೀರನಾರಾಯಣ ದೇವಸ್ಥಾನದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ 'ಕರ್ನಾಟಕ ಸಂಭ್ರಮ-50'ರ ಕನ್ನಡ ಜ್ಯೋತಿ ಸ್ವೀಕರಿಸುವರು. ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ವಿ.ಪ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭೆ ಸಭಾಧ್ಯಕ್ಷ ಯು.ಟಿ ಖಾದರ್, ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು. ಬೆಳಿಗ್ಗೆ 11.30ಕ್ಕೆ ಸಾರ್ವಜನಿಕ ಸಭೆ ಏರ್ಪಡಿಸಲಾಗಿದೆ.

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ನಗರದ ಶ್ರೀ ವೀರನಾರಾಯಣ ದೇವಸ್ಥಾನದಿಂದ ನಾಡದೇವತೆ ತಾಯಿ ಭುವನೇಶ್ವರಿಗೆ ಪುಷ್ಪಾರ್ಚನೆ ಮೂಲಕ ಮೆರವಣಿಗೆ ಪ್ರಾರಂಭಗೊಳ್ಳಲಿದ್ದು, ಜಾಮಿಯಾ ಮಸೀದಿ, ಬಸವೇಶ್ವರ ವೃತ್ತ, ಕೆ.ಎಚ್ ಪಾಟೀಲ ವೃತ್ತ, ಪಂ.ಪುಟ್ಟರಾಜ ಗವಾಯಿಗಳ ವೃತ್ತ, ಜನರಲ್ ಕಾರಿಯಪ್ಪ ವೃತ್ತದ ಮೂಲಕ ದಿ ಕಾಟನ್ ಸೇಲ್ ಸೊಸೈಟಿಗೆ ತಲುಪಲಿದೆ.

### ಸಾಂಸ್ಕೃತಿಕ ವೈಭವ

ಕಾರ್ಯಕ್ರಮದಲ್ಲಿ ಕರ್ನಾಟಕ ನಾಮಕರಣ ಮಹೋತ್ಸವದ ಪುಸ್ತಕ ಬಿಡುಗಡೆ, ಕರ್ನಾಟಕ ನಾಮಕರಣ ಅಪರೂಪದ ಭಾವಚಿತ್ರಗಳ ಪ್ರದರ್ಶನ, ಕರ್ನಾಟಕ ಜಾನಪದ ವಿಶ್ವ ವಿದ್ಯಾಲಯದ ಹತ್ತು ಜಿಲ್ಲೆಗಳ ಗ್ರಾಮ ಚರಿತ ಕೋಶ ಬಿಡುಗಡೆ, ಗದಗ ಜಿಲ್ಲೆಯ ಪ್ರವಾಸಿ ತಾಣಗಳ ಪ್ರದರ್ಶನಗಳು ಜರುಗಲಿವೆ.

ನವೆಂಬರ್ 1ರಂದು ಸಂಜೆ 6 ಗಂಟೆಯಿಂದ ಗದುಗಿನ ಶಾಲಾ ಮಕ್ಕಳಿಂದ ನೃತ್ಯ ರೂಪಕ, ಕಲಾವಿದರಾದ ಅಪ್ಪಣ್ಣ ರಾಮದುರ್ಗ, ವಾಣಿ, ಪ್ರವೀಣ ಗಸ್ತಿ ಅವರಿಂದ ಕಾರ್ಯಕ್ರಮ ಜರುಗಲಿದೆ. ಝೀ ಕನ್ನಡ ಸರಿಗಮಪ ಕಲಾವಿದರಾದ ಶ್ರೀರಾಮ ಕಾಸರ, ಶರಧಿ ಪಾಟೀಲ, ಕಂಬದ ರಂಗಯ್ಯ, ದಿಯಾ ಹಿಗಡೆ ಅವರಿಂದ ಕನ್ನಡ ಚಿತ್ರಗೀತೆಗಳ ಕಾರ್ಯಕ್ರಮ ಜರುಗಲಿವೆ.

## 'ಅಂಬಾರಿ' ಬಸ್ ಸೇವೆಗೆ ಇಂದು ಚಾಲನೆ



**■ ವಿಜಯಸಾಕ್ಷಿ ಸುದ್ದಿ, ಗದಗ**

ಮೈಸೂರು ರಾಜ್ಯಕ್ಕೆ ಕರ್ನಾಟಕ ನಾಮಕರಣಗೊಂಡು 50 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಅವಳಿ ನಗರದಲ್ಲಿ ಬೃಹತ್ ಐತಿಹಾಸಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕರ್ನಾಟಕ ಸಂಭ್ರಮ-50ರ ಅಂಗವಾಗಿ ಅವಳಿ ನಗರ ಚಿತ್ತಾರ ಹಾಗೂ ದೀಪಾಲಂಕಾರಗಳಿಂದ ಸಿಂಗಾರಗೊಂಡಿದೆ. ಅವಳಿ ನಗರದ ಸೌಂದರ್ಯವನ್ನು ಸವಿಯಲು ವಿಶೇಷ 'ಅಂಬಾರಿ' ಬಸ್ ಸೇವೆಗೆ ಚಾಲನೆ ನೀಡಲಾಗುತ್ತಿದೆ. ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ ಪಾಟೀಲ ಅವರು ನವೆಂಬರ್ 1ರಂದು ಮುಂಜಾನೆ 10 ಗಂಟೆಗೆ ನಗರದ ಕೆ.ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಈ ಸೇವೆಗೆ ಚಾಲನೆ ನೀಡುವರು.






# ಕರ್ನಾಟಕ ನಾಮಕರಣ : ಗದುಗಿನ ಕೊಡುಗೆ


**'ರಾಜ್ಯ ಕರ್ನಾಟಕ ನಾಮಕರಣವಾಗಿ 01-11-2023ಕ್ಕೆ 50 ವರ್ಷ' ಕರ್ನಾಟಕ ಏಕೀಕರಣ, ಕರ್ನಾಟಕ ನಾಮಕರಣದಲ್ಲಿ ಗದಗ ಜಿಲ್ಲೆಯ ಪಾತ್ರ ಅವಿಸ್ಮರಣೀಯ**

**ಗದಗ :** ಕರ್ನಾಟಕ ಹೆಸರು ಪ್ರಸ್ತಾಪವಾದದ್ದು ಆರೇಳು ನೂರು ವರ್ಷಗಳ ಹಿಂದೆ 14-15ನೇ ಶತಮಾನದಲ್ಲಿ ಕವಿ ಕುಮಾರವ್ಯಾಸ ರಚಿಸಿದ ಮಹಾಕಾವ್ಯಕ್ಕೆ "ಕರ್ಣಾಟ ಭಾರತ ಕಥಾ ಮಂಜರಿ" ಎಂದು ಹೆಸರಿಟ್ಟು ಕನ್ನಡ ನಾಡಿಗೆ ಕರ್ನಾಟಕ ಎಂದು ಹೆಸರು ಇಡುವ ಸಮಸ್ಯೆಗೆ ಪರಿಹಾರ ಸೂಚಿಸಿದ್ದರು.

'ಕಾವ ಗದುಗಿನ ವೀರ ನಾರಾಯಣ ಬೀಡು' ಎಂದು ಸಾರಿದ ಕುಮಾರವ್ಯಾಸ, ಗದುಗಿನ ಹೆಸರಿನ ಜಿಜ್ಞಾಸೆಗೂ ಪೂರ್ಣವಿರಾಮ ನೀಡಿದ್ದಾರೆ. ಕರ್ನಾಟಕವನ್ನು, ಗದಗನ್ನು ಹಾಗೂ ತಮ್ಮ ಆರಾಧ್ಯದೈವ ವೀರನಾರಾಯಣನನ್ನು ಭಾರತದ ಸಾಹಿತ್ಯ ಲೋಕದಲ್ಲಿ ಅಜರಾಮರಗೊಳಿಸಿದ್ದಾನೆ.

**'ಕರ್ಣಾಟ ಭಾರತಕಥಾ ಮಂಜರಿ' :** ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡುವಲ್ಲಿ ಗದುಗಿನ ಪಾತ್ರ ಕುರಿತು ಚಿಂತನೆ ಮಾಡಿದಾಗ ಮುಂಚೂಣಿಯಲ್ಲಿ ಬರುವ ಹೆಸರು 'ಕುಮಾರವ್ಯಾಸ'. "ಕರ್ಣಾಟ ಭಾರತ ಕಥಾ ಮಂಜರಿ" ಗದುಗಿನ ಭಾರತ ಕುಮಾರವ್ಯಾಸನ ಕಥನ-ಕಾವ್ಯ. ಇಲ್ಲಿ ಕವಿ ಕನ್ನಡ ನಾಡಿಗೆ ಕರ್ನಾಟಕ ಎಂದು ಹೆಸರಿಸುವುದರ ಜೊತೆಗೆ ಗದುಗಿನ ವೀರನಾರಾಯಣನನ್ನು ಕನ್ನಡ ಸಾರಸ್ವತ ಲೋಕಕ್ಕೆ ಹಾಗೂ ಗದಗನ್ನು ನಾಡಿಗೆ ಪರಿಚಯಿಸಿದ್ದರು.

ಕನ್ನಡ ಭಾಷಿಕ ಪ್ರದೇಶಕ್ಕೆ 'ಕರ್ನಾಟಕ' ಎಂದು ಹೆಸರಿಸಬೇಕೆಂದು ಐದಾರುನೂರು ವರ್ಷಗಳ ಹಿಂದಿನ ಒತ್ತಾಸೆಯಾಗಿದ್ದಿತೆಂದು ಹೇಳಬಹುದು. ಈ ಕಾವ್ಯಕ್ಕೆ ಮಹಾಭಾರತ ಎಂದಿಲ್ಲ. ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂದು ಹೇಳಿದ್ದಾರೆ. ಗ್ರಂಥದ ಮೂಲ ಹೆಸರು ಮಾತ್ರ "ಕರ್ಣಾಟ ಭಾರತ ಕಥಾ ಮಂಜರಿ"ಯಾಗಿದೆ. .




**ಏಕೀಕರಣದ ಇತಿಹಾಸ :** 'ಕರ್ನಾಟಕ' ನಾಮಕರಣದ ಮೊದಲು ಕರ್ನಾಟಕ ಏಕೀಕರಣದ ಇತಿಹಾಸದ ಅವಲೋಕನ ಮಾಡುವುದು ಅವಶ್ಯಕ. 1956 ರಲ್ಲಿ ಕನ್ನಡ ಭಾಷಿಕ ಪ್ರದೇಶ ಒಂದಾಗುವ ಪೂರ್ವದಲ್ಲಿ 20 ಭಿನ್ನ ಭಿನ್ನ ಆಡಳಿತಗಳಲ್ಲಿ ಹಂಚಿ ಹೋಗಿದ್ದಿತು.

ಮುಖ್ಯವಾಗಿ 1. ಮೈಸೂರು ರಾಜ್ಯ 2. ಕೊಡಗು ರಾಜ್ಯ 3. ಮುಂಬಯಿ ಕರ್ನಾಟಕ 4. ಮದ್ರಾಸ ಅಡಳಿತ ಪ್ರದೇಶ 5. ಹೈದ್ರಾಬಾದ ನಿಜಾಮ ಆಡಳಿತ ಪ್ರದೇಶ ಹಾಗೂ ಇತರೆ 15 ಸಣ್ಣ ಪುಟ್ಟ ಸಂಸ್ಥೆಗಳು.

ಆಧುನಿಕ ಭಾರತದ ಇತಿಹಾಸದಲ್ಲಿ ಕ್ರಿ.ಶ. 1857 ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಬಹಳ ಮುಖ್ಯವಾದದ್ದು. ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡು ಬ್ರಿಟನ್‌ನ ರಾಣಿ ವಿಕ್ಟೋರಿಯಾ 1858 ರಲ್ಲಿ ಸನ್ನದನ್ನು ಹೊರಡಿಸಿ ಭಾರತದ ಆಡಳಿತವನ್ನು ನೇರವಾಗಿ ತನ್ನ ಆಡಳಿತಕ್ಕೆ ತೆಗೆದುಕೊಂಡಳು. ಆ ಕಾಲದಲ್ಲಿ ಜಾನ್ ಬ್ರೈಟ್ ಎಂಬ ರಾಜಕೀಯ ಧುರೀಣರು ಭಾರತವನ್ನು ಭಾಷೆಗಳ ಭೌಗೋಳಿಕ ಪರಿಸರದ ಆಧಾರದ ಮೇಲೆ ಐದು ಭಾಗಗಳನ್ನಾಗಿ ವಿಂಗಡಿಸಬೇಕು ಎಂದರು. ಭಾಷೆಯನ್ನೇ ಆಧಾರವಾಗಿಟ್ಟುಕೊಂಡು ಭಾರತವನ್ನು ಆಡಳಿತದ ಅನುಕೂಲಕ್ಕೆ ವಿಭಜಿಸಬೇಕೆಂಬ ಚಿಂತನೆಗೆ ಚಾಲನೆ ಸಿಕ್ಕಿತು. 1874 ರಲ್ಲಿ ಭಾಷಾವಾರು ಪ್ರಾಂತಗಳ ರಚನೆಯ ಕೂಗಿಗೆ ಒತ್ತು ದೊರೆಯಿತು.

ಕನ್ನಡ ನಾಡಿನಲ್ಲಿ ಕನ್ನಡಿಗರ ಶ್ರೇಯೋಭಿವೃದ್ಧಿಗಾಗಿ 20-07-1890 ರಂದು ಧಾರವಾಡಲ್ಲಿ "ಕರ್ನಾಟಕ ವಿದ್ಯಾವರ್ಧಕ ಸಂಘ" ಹುಟ್ಟಿಕೊಂಡಿತು. ರಾ.ಹ. ದೇಶಪಾಂಡೆ ಅವರು ಈ ಸಂಘದ ಹಿಂದಿನ ಶಕ್ತಿಯಾಗಿದ್ದರು.

## ಕರ್ನಾಟಕ ಏಕೀಕರಣದಲ್ಲಿ ಗದಗ ಜಿಲ್ಲೆಯ ಮಹನೀಯರು




**'ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರು' :** ಆಲೂರು ವೆಂಕಟರಾಯರು ರೋಣ ತಾಲೂಕಿನ ಹೊಳೆ ಆಲೂರಿನವರು. ಧಾರವಾಡದಲ್ಲಿ ಹುಟ್ಟಿ ಬೆಳೆದು (1880) ವಕೀಲರಾದ ರಾಯರು ವಕೀಲಿಕೆ ಮಾಡದೇ ಕನ್ನಡ ನುಡಿ ಸೇವೆಗೆ ಸಮರ್ಪಿತರಾದರು. 1906ರಲ್ಲಿ 'ವಾಗ್ಭೂಷಣ' ಪತ್ರಿಕೆ ಪ್ರಾರಂಭಿಸಿದರು. 1907 ರಲ್ಲಿ ಕನ್ನಡ ಗ್ರಂಥಕರ್ತರ ಸಮ್ಮೇಳನ ನಡೆಸಿದರು. 1909 ರಲ್ಲಿ ರಾಷ್ಟ್ರೀಯ ಶಾಲೆ ಆರಂಭಿಸಿದರು. ಆಲೂರ ಅವರು ಕನ್ನಡಕ್ಕಾಗಿ ಕೈ ಎತ್ತಿ ನಿಮ್ಮ ಕೈ ಕಲ್ಪವೃಕ್ಷವಾಗುವುದೆಂದರು. ಕರ್ನಾಟಕ ಗತವೈಭವ ಸೇರಿ ಒಟ್ಟು 28 ಕೃತಿಗಳನ್ನು ರಚಿಸಿದರು. 16ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕನ್ನಡತ್ವಕ್ಕಾಗಿ ಹೋರಾಡಿದ, ಏಕೀಕರಣಕ್ಕಾಗಿ ನಿರಂತರ ಶ್ರಮಿಸಿದ ಆಲೂರ ವೆಂಕಟರಾಯರ ಜೀವನವೇ ಕರ್ನಾಟಕತ್ವದ ತಪೋಬಲವಾಯಿತು. ಕನ್ನಡಿಗರ ಜೀವಿತ ಕಾಲವನ್ನೆಲ್ಲ ಕನ್ನಡವನ್ನು ಬೆಳೆಸಲು ಕನ್ನಡಿಗರನ್ನು ಒಂದುಗೂಡಿಸಲು ಸಮರ್ಪಿತರಾದರು.



**ಹುಯಿಲಗೋಳ ನಾರಾಯಣರಾಯರು :** 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಹಾಡು ಬರೆದು ಕನ್ನಡಿಗರ ಮನೆ, ಮನ ಮುಟ್ಟುವ ಚಮತ್ಕಾರ ಮಾಡಿದವರು. ಹುಯಿಲಗೋಳ ನಾರಾಯಣರಾಯರು ಕನ್ನಡಿಗರಲ್ಲಿ ಕನ್ನಡತನದ ಕಿಚ್ಚು ಹಚ್ಚಿ ಎಚ್ಚರಿಸಿ, ಕನ್ನಡಾಭಿಮಾನ ಜಾಗೃತಗೊಳಿಸಿದವರು. 1884 ರಲ್ಲಿ ಗದುಗಿನಲ್ಲಿ ಜನಿಸಿದರು. ನಾರಾಯಣರಾಯರ ತಂದೆ ಕೃಷ್ಣರಾಯರು ತಾಯಿ ರಾಧಾಬಾಯಿ, ಗದಗ, ಧಾರವಾಡ, ಪುಣೆ ಹಾಗೂ ಮುಂಬಯಿಯಲ್ಲಿ ಶಿಕ್ಷಣ ಮುಗಿಸಿ ವಕೀಲರಾದ ರಾಯರು ಸಾಮಾಜಿಕ ಸುಧಾರಣೆಗೆ ನಾಟಕಗಳನ್ನು ಬರೆದು ಖ್ಯಾತರಾದರು.

ಕನ್ನಡದ ಕಹಳೆಯಾಗಿ ಉತ್ತುಂಗ ಕವಿಯಾಗಿ, ಕರ್ನಾಟಕದ ಸಾಮಾಜಿಕ ಕಳಕಳಿಯ ಬರಹಗಾರರಾಗಿ, ನಾಟಕಕಾರರಾಗಿ, ಸ್ವಾತಂತ್ರ್ಯ ಯೋಧರಾಗಿ, ಕನ್ನಡದ ಜೀವಂತಿಕೆಗೆ ಜೀವ ತುಂಬುವವರಾಗಿ ಮೆರೆದ ನಾರಾಯಣರಾಯರು ತಮ್ಮ ಉದಯವಾಗಲಿ ಗೀತೆಯಿಂದ ಚೆಲುವ ಕನ್ನಡ ನಾಡು ಕಟ್ಟುವಲ್ಲಿ ಕೆಲಸ ಮಾಡಿದರು.



**ಅಂದಾನಪ್ಪ ದೊಡ್ಡಮೇಟಿ :** ಕರ್ನಾಟಕ ಏಕೀಕರಣದ ರೂವಾರಿಗಳೆಂದೇ ಖ್ಯಾತರಾಗಿರುವ ಶ್ರೀ ಅಂದಾನಪ್ಪ ದೊಡ್ಡಮೇಟಿ ಅವರು (1908) ಗದಗ ಜಿಲ್ಲೆಯ ರೋಣ ತಾಲೂಕಿನ ಪುಟ್ಟಹಳ್ಳಿ ಜಕ್ಕಲಿಯವರು. ತಂದೆ ಜ್ಞಾನಪ್ಪ, ತಾಯಿ ಬಸಮ್ಮ ಇವರು ಆಗರ್ಭ ಶ್ರೀಮಂತರು. ದೇಶ ಸೇವಾ ಸಂಘ ಕಟ್ಟಿದ ಶ್ರೀ ಅಂದಾನಪ್ಪ 1931 ರಲ್ಲಿ ಪಂಡಿತ ಜವಹರಲಾಲ ನೆಹರೂರವರನ್ನು ಜಕ್ಕಲಿಗೆ ಬರಮಾಡಿಕೊಂಡು ಬಂಗಾರದ ತಕಲಿ ನೀಡಿ ಗೌರವಿಸಿದರು. ಹರಿಜನ ಸೇವೆಗೆ ಸಮರ್ಪಿಸಿಕೊಂಡಿದ್ದ ದೊಡ್ಡಮೇಟಿಯವರು 1934 ರಲ್ಲಿ ಜಕ್ಕಲಿಗೆ ಬಾಪೂಜಿಯವರನ್ನು ಬರಮಾಡಿಕೊಂಡರು. 1937 ಮುಂಬಯಿ ಶಾಸನ ಸಭೆಯಲ್ಲಿ ಕನ್ನಡ ಡಿಂಡಿಮ ಮೊಳಗಿದ ದೊಡ್ಡಮೇಟಿಯವರು 1938 ಎಪ್ರೀಲ್ 4 ರಂದು "ಪ್ರತ್ಯೇಕ ಕರ್ನಾಟಕ ಪ್ರಾಂತ" ರಚನೆಯಾಗಬೇಕೆಂದು ಗೊತ್ತುವಳಿ ಬೆಂಬಲಿಸಿದರು. 1957 ರಲ್ಲಿ ಮೈಸೂರ ರಾಜ್ಯ ವಿಧಾನ ಸಭೆಯಲ್ಲಿ ರಾಜ್ಯದ ಹೆಸರು "ಕರ್ನಾಟಕ" ಎಂದು ಕರೆಯಬೇಕೆನ್ನುವ ಗೊತ್ತುವಳಿಯನ್ನು ಮಂಡಿಸಿದರು. ಇದು ಕರ್ನಾಟಕ ನಾಮಕರಣಕ್ಕೆ ನಾಂದಿ ಹಾಡಿತೆನ್ನಬಹುದು.



**ದಾನಶೂರ ಬಸರೀಗಿಡದ ವೀರಪ್ಪ :** ಕರ್ನಾಟಕದ ಫೋರ್ಡ್, ಬರಗಾಲ ಬಂಟ, ಕರ್ನಾಟಕ ಏಕೀಕರಣ ರೂವಾರಿ, ಕಲಿಯುಗ ಕರ್ಣ, ದಾನಶೂರ ಎಂಬ ಬಿರುದುಗಳನ್ನು ಪಡೆದ ಬಸರೀಗಿಡದ ವೀರಪ್ಪನವರು 1901 ರಲ್ಲಿ ಗದಗ ಜಿಲ್ಲೆಯ ರೋಣದ ಚನ್ನಪ್ಪ ಮತ್ತು ಪರಮ್ಮ ಇವರ ಮಗನಾಗಿ ಜನಿಸಿ, 5ನೇ ತರಗತಿವರೆಗೆ ಓದಿ 12ನೇ ವಯಸ್ಸಿನಲ್ಲಿ ಹಮಾಲಿ ಕೆಲಸಕ್ಕೆ ಸೇರಿದರು. ಕಿರಾಣಿ ವ್ಯಾಪಾರ, ದಲಾಲಿ ಅಂಗಡಿ ತೆರೆದು, ವರ್ಕ್‌ಶಾಪ್ ಪ್ರಾರಂಭ, 40 ಮೋಟಾರುಗಳ ವೀರೇಶ್ವರ ಮೋಟಾರ್ ಸರ್ವಿಸ್ ಪ್ರಾರಂಭಿಸಿ 300 ಕಾರ್ಮಿಕರಿಗೆ ಕೆಲಸ ನೀಡಿದರು. 350 ಎಕರೆ ಜಮೀನು ಖರೀದಿಸಿ ಆಧುನಿಕ ಕೃಷಿ ಉಪಕರಣಗಳನ್ನು ಬಳಸಿ ವ್ಯವಸಾಯ ನಡೆಸಿ ಪ್ರಯೋಗಶೀಲರೆನಿಸಿದರು. 1942-43 ರಲ್ಲಿ ಭೀಕರ ಬರಗಾಲ ಬಂದಾಗ ಸಂತ್ರಸ್ತರಿಗೆ ಆಶ್ರಯ ಕಲ್ಪಿಸಿ "ಬರಗಾಲ ಬಂಟ" ಎಂಬ ಬಿರುದು ಪಡೆದಿದ್ದರು. ಅಂಧರ ಬಾಳು ಬೆಳಗಿದ ಪಂಡಿತ ಗವಾಯಿಗಳು ಸಾಲದ ಸುಳಿಯಲ್ಲಿ ಸಿಲುಕಿ ತಮ್ಮ ಶಿಷ್ಯರೊಂದಿಗೆ ಊರೂರು ಅಲೆಯುತ್ತಿದ್ದಾಗ ಅವರನ್ನು ಸಾಲದಿಂದ ಮುಕ್ತಗೊಳಿಸಿ ವೀರೇಶ್ವರ ಪುಣ್ಯಾಶ್ರಮ ಸ್ಥಾಪನೆಗೆ ನಾಂದಿ ಹಾಡಿದರು.




**ಕೆ.ಎಫ್. ಪಾಟೀಲ :** 1973ರ ಕರ್ನಾಟಕ ನಾಮಕರಣ ಮಹೋತ್ಸವದ ಕಾರ್ಯಾಧ್ಯಕ್ಷರಾದ ಕೆ.ಎಫ್. ಪಾಟೀಲರವರು ಹಂಪಿಯ ಸ್ಮಾರಕ ಪಂಚವಟಿಯಲ್ಲಿ ಸಸಿನೆಟ್ಟು ಸಂಭ್ರಮಿಸಿದರು. ಮುಂದುವರೆದು ಹಂಪಿಯ ವಿರೂಪಾಕ್ಷನನ್ನು ರಾಜ್ಯದ ಎಲ್ಲ ನದಿಗಳ ಪುಣ್ಯಜಲದಿಂದ ಅಭ್ಯಂಜನ ಮಾಡಿ ಅಲ್ಲಿಂದ ಕನ್ನಡ ಜ್ಯೋತಿಯ ಹೊತ್ತಿಸಿಕೊಂಡು ಅದರ ಉಸ್ತುವಾರಿಯನ್ನು ವಹಿಸಿಕೊಂಡು ಹಂಪೆಯಿಂದ ಗದುಗಿನ ವೀರನಾರಾಯಣನ ಸನ್ನಿಧಿಗೆ ಜ್ಯೋತಿಯನ್ನು ತಂದು ಇಡೀ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದು ಅವಿಸ್ಮರಣೀಯವಾಗಿದೆ.



## 1924 ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಬೆಳಗಾವಿ

1924ರ ಡಿಸೆಂಬರ್ 26, 27 ರಂದು ಮಹಾತ್ಮಾ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ 39ನೇ ಅಧಿವೇಶನವು ರಾಜ್ಯದ ಎರಡನೆ ರಾಜಧಾನಿ ಎಂದು ಕರೆಯಿಸಿಕೊಳ್ಳುವ ಬೆಳಗಾವಿಯಲ್ಲಿ ನಡೆಯಿತು.



ಆ ಅಧಿವೇಶನದಲ್ಲಿಯೇ ಹುಯಿಲಗೋಳ ನಾರಾಯಣ-ರಾಯರು ರಚಿಸಿದ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಗೀತೆಯನ್ನು ಬಾಲಕಿಯಾಗಿದ್ದ ಗಂಗೂಬಾಯಿ ಹಾನಗಲ್ಲ ಅವರು ಹಾಡಿ ಎಲ್ಲರ ಪ್ರಶಂಸೆ ಗಳಿಸಿದ್ದರು. ಈ ಘಟನೆ ಸ್ಥಳೀಯ ಭಾಷೆ, ಸಂಸ್ಕೃತಿ ಹಾಗೂ ಕನ್ನಡ ಚಳುವಳಿಗಳಿಗೆ ದೊಡ್ಡ ಶಕ್ತಿ ಲಭಿಸಿತು.


ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಿ 50 ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಈ ವರ್ಷದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ವಿಶೇಷ ರೀತಿಯಾಗಿ ಆಚರಿಸಲು ಉದ್ದೇಶಿಸಲಾಗಿದೆ. ನವೆಂಬರ 1 ರಂದು ಜಿಲ್ಲೆಯ ಎಲ್ಲ ಮನೆಗಳ ಮುಂದೆ ಕೆಂಪು ಮತ್ತು ಹಳದಿ ಬಣ್ಣದ ರಂಗೋಲಿಯನ್ನು ಬಿಡಿಸಿ ಕರ್ನಾಟಕ ಸಂಭ್ರಮ-50 "ಹೆಸರಾಯಿತು ಕರ್ನಾಟಕ, ಉಸಿರಾಯಿತು ಕನ್ನಡ" ಎಂಬ ಘೋಷ ವಾಕ್ಯವನ್ನು ಬರೆಯಬೇಕು. ನವೆಂಬರ 1ರ ಬೆಳಗ್ಗೆ 9 ಗಂಟೆಗೆ ಎಲ್ಲಾ ಆಕಾಶವಾಣಿ ಕೇಂದ್ರಗಳಲ್ಲಿ (ರೆಡಿಯೋ) ನಾಡಗೀತೆಯನ್ನು ಪ್ರಸಾರ ಮಾಡಲಾಗುವುದು. ಈ ಸಂದರ್ಭದಲ್ಲಿ ಕನ್ನಡ ನಾಡಿನ ಸಮಸ್ತ ನಾಗರಿಕರು ಎದ್ದು ನಿಂತು ರಾಷ್ಟ್ರ ಗೀತೆಗೆ ಗೌರವ ಸಲ್ಲಿಸುವ ರೀತಿಯಲ್ಲಿ ನಾಡ ಗೀತೆಗೂ ಗೌರವ ಸಲ್ಲಿಸಬೇಕು. ಸಂಜೆ 5 ಗಂಟೆಗೆ ಜಿಲ್ಲೆಯ ಎಲ್ಲ ಗ್ರಾಮಗಳ ಮೈದಾನದಲ್ಲಿ ಕೆಂಪು ಹಳದಿ ಬಣ್ಣದ ಗಾಳಿಪಟಗಳನ್ನು ಆಕಾಶಕ್ಕೆ ಹಾರಿ ಬಿಡುವ ಮೂಲಕ ಸುವರ್ಣ ಸಂಭ್ರಮ ಗಾಳಿಪಟ ಉತ್ಸವ ಆಚರಿಸಬೇಕು. ಸಾಯಂಕಾಲ 7ಕ್ಕೆ ಜಿಲ್ಲೆಯ ಎಲ್ಲ ಗ್ರಾಮಗಳ ಮನೆಗಳ ಮುಂದೆ ಕಚೇರಿಗಳ ಮುಂದೆ ಹಾಗೂ ಅಂಗಡಿ-ಮಳಿಗೆಗಳ ಮುಂದೆ ಹಣತೆ (ದೀಪ) ಹಚ್ಚುವ ಮೂಲಕ ಕನ್ನಡ ಜ್ಯೋತಿ ಬೆಳಗಿಸಬೇಕು.



**-ಸನ್ಮಾನ್ಯ ಶ್ರೀ ಶಿವರಾಜ ತಂಗಡಗಿ**
ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಕರ್ನಾಟಕ ಸರ್ಕಾರ.

ಕರ್ನಾಟಕ ಸಂಭ್ರಮ-50ರ ಸಂಭ್ರಮವನ್ನು ಅಚ್ಚಳಿಯದ ಹಾಗೆ ನೆನಪಿನಲ್ಲಿಟ್ಟು ಕೊಳ್ಳುವಂತಾಗಲು ಜಿಲ್ಲಾಡಳಿತ ಆಸಕ್ತಿ ವಹಿಸಿ 31 ಅಡಿ ಎತ್ತರದ ಸ್ತಂಬ ನಿರ್ಮಿಸಲಾಗಿದೆ. 1973 ಹಾಗೂ 2023ರ ಐತಿಹಾಸಿಕ ಘಟನೆಗಳನ್ನು ಹಾಗೂ ಇತರೆ ಪ್ರಮುಖ ಮಾಹಿತಿ ಇದೆ.

ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ನಾಮಕರಣ ಮಾಡಬೇಕು ಎಂಬ ದಿಸೆಯಲ್ಲಿ ಗದಗ ಭಾಗದವರು ವಿಶೇಷ ಪ್ರಯತ್ನ ಮಾಡಿದ್ದಾರೆ. ಕುಮಾರವ್ಯಾಸ ಅವರು ತಮ್ಮ ಕಾವ್ಯಕ್ಕೆ ಕರ್ನಾಟಕ ಭಾರತ ಕಥಾಮಂಜರಿ ಹೆಸರು ನೀಡಿದ್ದರೆ, ದುರ್ಗಸಿಂಹ ಹಾಗೂ ಅಲೂರು ವೆಂಕಟರಾಯರು ಕರ್ನಾಟಕ ಹೆಸರನ್ನು ಉಲ್ಲೇಖಿಸಿದ್ದಾರೆ. ಜಿಲ್ಲೆಯ ಅಂದಿನ ಪ್ರಮುಖರಾದ ಅಂದಾನಪ್ಪ ದೊಡ್ಡಮೇಟಿ, ಕೆ.ಎಚ್. ಪಾಟೀಲ, ಕೆ.ಎಂ. ಕಣವಿ ಸೇರಿ ಹಲವರು ಕರ್ನಾಟಕ ನಾಮಕರಣವಾಗಲು ಶ್ರಮಿಸಿದ್ದಾರೆ. ಅಲ್ಲದೇ, ಇಂದಿರಾ ಗಾಂಧಿ, ರಾಜೀವ ಗಾಂಧಿ ಹಾಗೂ ಸಾಯಿ ಬಾಬಾ ಅವರು ಸಾಕ್ಷಿಯಾಗಿರುವಂತಹ ಸತ್ವಯುತ ದಿ ಕಾಟನ್ ಸೇಲ್ ಸೊಸೈಟಿ ಆವರಣದ ನೆಲದಲ್ಲಿ ಐತಿಹಾಸಿಕ ಕಾರ್ಯಕ್ರಮ ನಡೆಯುತ್ತಿದೆ.



**-ಡಾ. ಎಚ್.ಕೆ. ಪಾಟೀಲ**
ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರು ಕರ್ನಾಟಕ ಸರಕಾರ

## ಭಾವೈಕ್ಯತೆ ಬೀಡು ಗದಗ

"ಸರ್ವಜನಾಂಗದ ಶಾಂತಿಯ ತೋಟ ರಸಿಕರ ಕಂಗಳ ಸೆಳೆಯುವ ನೋಟ" ಎಂಬ ಕುವೆಂಪುರವರ ಮಾತಿನಂತೆ ಕರ್ನಾಟಕದಲ್ಲಿ ಅತ್ಯಂತ ವಿಶಿಷ್ಟವಾಗಿರುವಂತಹ ಜಿಲ್ಲೆ, ಮುದ್ರಣ ನಗರಿ, ಭಾವೈಕ್ಯತೆಯ ಬೀಡು, ಸಾಮರಸ್ಯದ ನಾಡು ಎಂದೇ ಪ್ರಸಿದ್ಧಿಯಾಗಿರುವ ಗದಗ ನಗರ ಸರ್ವಧರ್ಮಗಳ ಸಮನ್ವಯತೆಯನ್ನು ಸಾಧಿಸುತ್ತಾ ಬಂದಿದೆ. ಇಡೀ ವಿಶ್ವದಲ್ಲಿಯೇ ಗದಗ ನಗರ ಮಾದರಿಯಾಗಿರುವಂತಹದು ಎಂದರೆ ತಪ್ಪಾಗಲಿಕ್ಕಿಲ್ಲ.

ಇಲ್ಲಿ ಶೈವ ಸಂಪ್ರದಾಯದ ತ್ರಿಕೂಟೇಶ್ವರ ದೇವಾಲಯ, ವೈಷ್ಣವ ಸಂಪ್ರದಾಯದ ವೀರನಾರಾಯಣ ದೇವಸ್ಥಾನ, ಇಸ್ಲಾಂ ಧರ್ಮದ ಜುಮ್ಮಾ ಮಸೀದಿಗಳು ಇಂದಿಗೂ ಸಹ ಒಂದೇ ಟ್ರಸ್ಟ್‌ನ ಅಡಿಯಲ್ಲಿ ಇರುವುದನ್ನು ನೋಡಿದರೆ ಇಲ್ಲಿಯ ಜನರ ಸಾಮರಸ್ಯತೆ ಭಾವೈಕ್ಯತೆ ಇಡೀ ಜಗತ್ತಿಗೆ ಜಗಜ್ಜಾಹೀರಾಗುತ್ತದೆ.

ಇಂದಿಗೂ ಸಹ ಈ ಮೂರು ಧಾರ್ಮಿಕ ಕೇಂದ್ರಗಳಲ್ಲಿ ಸಾರ್ವಜನಿಕವಾಗಿ ಯಾವುದಾದರೂ ಸಭೆ ಸಮಾರಂಭಗಳನ್ನು ಮಾಡುವುದಾದರೆ ಸಹಕಾರ ಮನೋಭಾವನೆಯಿಂದ ಮಾಡುವುದನ್ನು ಕಾಣುತ್ತೇವೆ. 1973ರ ಕರ್ನಾಟಕ ನಾಮಕರಣ ಸಂದರ್ಭದಲ್ಲಿಯೂ ಸಹ ವೀರನಾರಾಯಣ ಗುಡಿಯಿಂದ ಪ್ರಾರಂಭಿಸಿದ ಮೆರವಣಿಗೆಯು ಜಾಮಿಯಾ ಮಸೀದಿಯ ಮುಂಭಾಗದಿಂದ ಹೊರಟು ಕಾಟನ್ ಸೇಲ್ ಸೊಸೈಟಿಯಲ್ಲಿ ಸಂಪನ್ನಗೊಂಡಿತ್ತು. 50 ವರ್ಷಗಳ ನಂತರ ಸುವರ್ಣ ಕರ್ನಾಟಕ ಸಂಭ್ರಮದ ಮೂಲಕ ಮತ್ತದೇ ಭಾವೈಕ್ಯತೆಯು ಮರುಕಳಿಸುತ್ತಿದೆ.

## ನಾಗಪೂರ ಅಧಿವೇಶನ

1920 ರಲ್ಲಿ ನಾಗಪೂರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ 'ಕರ್ನಾಟಕ' ನಾಮಕರಣದಲ್ಲಿ ಹಾಗೂ ಭಾಷಾವಾರು ಪ್ರಾಂತಗಳ ರಚನೆಯಲ್ಲಿ ಬಹಳ ಮಹತ್ವದ ಪಾತ್ರ ವಹಿಸಿದೆ. ಕರ್ನಾಟಕದ ಏಕೀಕರಣ; ಕರ್ನಾಟಕ ಪ್ರತ್ಯೇಕ ಪ್ರಾಂತ ರಚನೆಯಾಗಿದ್ದು ಇಲ್ಲಿಯೇ ಎಂಬುದು ಮರೆಯುವಂತಿಲ್ಲ. ಕಾಂಗ್ರೆಸ್ ಪಕ್ಷದ ಸಂವಿಧಾನದಲ್ಲಿ ಕರ್ನಾಟಕಕ್ಕೆ ಸ್ವತಂತ್ರ ಸ್ಥಾನಮಾನ ದೊರೆಯಿತು. ಕಾಂಗ್ರೆಸ್ ಪಕ್ಷ ಭಾಷಾವಾರು ಪ್ರಾಂತ ರಚನೆಯನ್ನು ತತ್ವಶಃ ಒಪ್ಪಿತಲ್ಲದೆ, ಕರ್ನಾಟಕಕ್ಕೆ ಹಳೇ ಮೈಸೂರು, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕೊಡಗು, ಬಳ್ಳಾರಿ ಭಾಗ ಹಾಗೂ ದೇಶ ಸಂಸ್ಥಾನಗಳನ್ನು ಸೇರಿಸಿವೆ. ಕರ್ನಾಟಕ ಪ್ರಾಂತವೆಂದು ಕರೆದು ಅದಕ್ಕೆ ಪ್ರತ್ಯೇಕ ಅಸ್ತಿತ್ವವನ್ನು ಕಲ್ಪಿಸಿತು.

ಈ ಅಧಿವೇಶನಕ್ಕೆ ಸಿ.ವೈ. ರಾಘವಾಚಾರ್ಯ ಅಧ್ಯಕ್ಷರಾಗಿದ್ದರು. ಇವರು ಸಿ. ರಾಜಗೋಪಾಲಾಚಾರಿ ಅವರ ಕಕ್ಕಂದಿರು. ಈ ಅಧಿವೇಶನಕ್ಕೆ ಕರ್ನಾಟಕದಿಂದ 800 ಜನ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಸರ್ವಶ್ರೀ ಗಂಗಾಧರರಾವ್ ದೇಶಪಾಂಡೆ, ಕೌಜಲಗಿ ಶ್ರೀನಿವಾಸರಾಯರು, ಆಲೂರು ವೆಂಕಟರಾವ್, ಮುದವೀಡು ಕೃಷ್ಣರಾವ್, ಹರ್ಡೀಕರ ಮಂಜಪ್ಪ, ಕೌಜಲಗಿ ಹನುಮಂತರಾವ್ ಬ. ಲಮಾಣಿ, ಭೀಮರಾಯರು, ಮತ್ತಿಹಳ್ಳಿ ರಾಘವೇಂದ್ರರಾವ, ಕೆ.ಆರ್. ಕಾರಂತ, ಕರ್ನಾಡ ಸದಾಶಿವನವರು, ಗದಗದಿಂದ ಅನಂತರಾವ ಜಾಲಿಹಾಳ, ಡಾ. ಹುಯಿಲಗೋಳ, ಡಾ. ಉಮಚಗಿ ತೆರಳಿದ್ದರು.

ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತದ ಜೊತೆಗೆ ಕರ್ನಾಟಕ ಪ್ರಾಂತೀಯ ಕಚೇರಿ ಗದುಗಿಗೆ ಬಂದಿತು. ಗದಗ-ಬೆಟಗೇರಿ ನಗರಸಭೆ ಎದುರಿಗೆ ಇರುವ ಮೊರಬ ಗುರಾಚಾರ್ಯ ವಕೀಲರ ಮನೆ, ಈಗ ಫತ್ತೇಪೂರರ ಮನೆಯಲ್ಲಿ ಕರ್ನಾಟಕ ಕಾಂಗ್ರೆಸ್ ಕಚೇರಿ ಆರಂಭವಾಯಿತು. ಈ ಪ್ರಾಂತೀಯ ಕಚೇರಿಯಲ್ಲಿ ಗದಗ ತಾಲೂಕ ಕಾಂಗ್ರೆಸ್ ಕಚೇರಿ ಇದ್ದಿತು. ಡಾ. ವೆಂಕರಾವ ಹುಯಿಲಗೋಳ ಅಧ್ಯಕ್ಷರು, ಅನಂತರಾವ ಜಾಲಿಹಾಳ ಉಪಾಧ್ಯಕ್ಷ ಹಾಗೂ ಡಾ. ವಾಸುದೇವರಾವ್ ಉಮಚಗಿ ಏಕೀಕರಣದ ಸಂಘಕ್ಕೆ ಬೆನಗಲ್ ರಾಮರಾಯರು ಅಧ್ಯಕ್ಷರಾಗಿ ಬಿ. ಶಿವಮೂರ್ತಿ ಶಾಸ್ತ್ರಿಗಳು ಕಾರ್ಯದರ್ಶಿಯಾಗಿ ಅವಿಸ್ಮರಣೀಯ ಕೆಲಸ ಮಾಡಿ ಗಡಿ ಭಾಗದಲ್ಲಿ ಕನ್ನಡ ಪರ ಜಾಗೃತಿ ಮೂಡಿಸಿದರು. ಕಾಂಗ್ರೆಸ್ ಸೇವಾ ದಳದ ನಾ.ಸು. ಹರ್ಡೀಕರ ಅವರು 36 ಸಾವಿರ ಸಹಿ ಸಂಗ್ರಹ ಮಾಡಿ ಏಕೀಕರಣಕ್ಕೆ ಒತ್ತಡ ತಂದರು. ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡದಲ್ಲಿ "ಕರ್ನಾಟಕ ವಿಶ್ವವಿದ್ಯಾಲಯ" ಸ್ಥಾಪಿಸಬೇಕೆಂದು ಗೊತ್ತುವಳಿ ಸ್ವೀಕರಿಸಿತು.

1927 ರಲ್ಲಿ ಮೈಸೂರು ಮಹಾರಾಜರ ರಜತ ಮಹೋತ್ಸವ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಕರ್ನಾಟಕತ್ವದ ಹರಿಕಾರರೆಂದೇ ಹೆಸರಾಗಿದ್ದ ಆಲೂರು ವೆಂಕಟರಾಯರು 1930 ರಲ್ಲಿ ಜರುಗಿದ 16ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು. ಅವರು ಏಕೀಕರಣಕ್ಕಾಗಿ ಪರಿಶ್ರಮಿಸಿದರು. "ಕರ್ನಾಟಕ ವಿಶ್ವವಿದ್ಯಾಲಯ" ಸ್ಥಾಪನೆಯನ್ನು ಬಲವಾಗಿ ಪ್ರತಿಪಾದಿಸಿದರು.

1936 ರಲ್ಲಿ ಹಂಪಿಯಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ 600 ವರ್ಷಗಳ ಸ್ಮರಣೆಗಾಗಿ ಸ್ಮಾರಕೋತ್ಸವ ಏರ್ಪಡಿಸಲಾಯಿತು. 1937 ರಲ್ಲಿ ಕಾಂಗ್ರೆಸ್ ಹಾಗೂ ಕರ್ನಾಟಕ ಏಕೀಕರಣ ಸಂಘ ಸೇರಿ ಶಿಷ್ಟ ಮಂಡಳಿ ರಚಿಸಿಕೊಂಡವು. 1938 ರಲ್ಲಿ ಮುಂಬಯಿ ಹಾಗೂ ಮದ್ರಾಸ್ ಶಾಸನ ಸಭೆಗಳಲ್ಲಿ ಏಕೀಕರಣ ಗೊತ್ತುವಳಿ ಲಭ್ಯತೆ ಸಾಕೆಂದಿತು. ಅಂದು ಮಹಾತ್ಮಗಾಂಧಿ, ಪಂಡಿತ ನೆಹರು, ಸದಾರ ವಲ್ಲಭಭಾಯಿ ಪಟೇಲ, ಡಾ. ರಾಜೇಂದ್ರ ಪ್ರಸಾದ, ಡಾ. ಟಂಡನ್ ಮೊದಲಾದ ನಾಯಕರು ಭೇಟಿಯಾಗಿ ಕರ್ನಾಟಕ ಏಕೀಕರಣಕ್ಕೆ ಒತ್ತಾಯಿಸಲಾಯಿತು. ಆದರೆ 1939 ರಲ್ಲಿ ಎರಡನೇ ಮಹಾಯುದ್ಧ ಆರಂಭವಾದುದರಿಂದ ಏಕೀಕರಣ ವಿಷಯ ಮಹತ್ವ ಕಡಿಮೆಯಾಯಿತು.

1940 ರಲ್ಲಿ ಧಾರವಾಡದಲ್ಲಿ ಸಾಹಿತ್ಯ ಸಮ್ಮೇಳನ ಜರುಗಿತು. ಸಮ್ಮೇಳನದ ಮಹಿಳಾ ಗೋಷ್ಠಿಯಲ್ಲಿ "ಹರಿದು ಹಂಚಿ ಹೋದ ಕರ್ನಾಟಕದ ಭಾಗಗಳನ್ನೆಲ್ಲ ಒಂದುಗೂಡಿಸಿ ಒಂದು ಮಾಡಬೇಕೆಂದು ಸರಕಾರಕ್ಕೆ ಒತ್ತಾಯ ಪಡಿಸಬೇಕೆಂದು, ಕನ್ನಡ ನಾಡು ಒಂದಾಗದ ಹೊರತು ಕನ್ನಡತಿಯರಿಗೆ ಸಮಾಧಾನವಾಗದೆಂದು ಈ ಗೋಷ್ಠಿ ನಿರ್ಣಯಿಸುತ್ತದೆ" ಎಂದು ಸಾರಿತು.



ಕುಮಾರವ್ಯಾಸ ಸ್ತಂಭ

## ಸ್ವಾಗತಗೀತೆ

(1961 ಡಿಸೆಂಬರ 27 ರಂದು ಗದುಗಿನಲ್ಲಿ ಪ್ರಾರಂಭವಾದ 43ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ ವರಕವಿ ಶ್ರೀ ಹುಯಿಲಗೋಳ ನಾರಾಯಣರಾಯರು ರಚಿಸಿದ ಸ್ವಾಗತಗೀತೆ.)

ದಯಮಾಡಿ ದಯಮಾಡಿ ಕನ್ನಡ ಮನ್ನೆಯರೆ
ಜಯನಯವತಹ ನಿಮ್ಮ ಅಡಿಹುಡಿಯು ಬೀಳುವರೆ
ಕ್ಷೇತ್ರವಿದು ಜಕ್ಕಣನ ಕಲೆ ತೋರು ಮನೆಯಲ್ಲಿ
ಗಾತ್ರದಲ್ಲೊಳಗೊಂಡ ಚೆಲು ಬಟ್ಟಕೇರಿಯಲಿ
ಚೈತ್ರ ಗುರು ತೋಂಟದ ಸ್ವಾಮಿಗಳ ಸದರಿನಲಿ
ಶ್ರೀ ತ್ರಿಕೂಟೇಶ್ವರನ ದಿವ್ಯ ಸನ್ನಧಿಯಲ್ಲಿ
ಚಾಮರಸ ಕವಿ ಕುಮಾರವ್ಯಾಸರಿದ್ದೂರಿನಲಿ
ಸ್ವಾಮಿ ತೋಂಟದರ ನಿಘಂಟುವಿನ ತಾಣದಲಿ
ಪ್ರೇಮದಲಿ ನಿಜನಾಟ್ಯಕಲೆ ಬೆಳೆದ ಠಾವಿನಲಿ
ನೇಮದಲಿ ಸಿರಿ ಸುಖವು ವರ್ಧಿಸುವ ಗ್ರಾಮದಲಿ
ಸಂತಸದಿ ಕನ್ನಡದ ನಾಡುನುಡಿ ಹೇವದಲಿ
ಅಂತವಿಲ್ಲದ ಕ್ಷೇಮ ವಿಶ್ವಾಸ ಧರಿಸುತಲಿ
ಸಂತ ಕೃತು ಋಷಿವರನ ಬಿನ್ನಹಕೆ ಗದುಗಿನಲಿ
ನಿಂತ ಶ್ರೀ ವೀರನಾರಾಯಣನ ಸನಿಹದಲಿ

**-ಶ್ರೀ ಹುಯಿಲಗೋಳ ನಾರಾಯಣರಾಯರು**



ಐತಿಹಾಸಿಕ ವೀರನಾರಾಯಣ ದೇವಸ್ಥಾನ ಗದಗ


ಕರ್ನಾಟಕ ಸರಕಾರ
ಜಿಲ್ಲಾಡಳಿತ,
ಜಿಲ್ಲಾ ಪಂಚಾಯತ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಗದಗ
ಕರ್ನಾಟಕ
ಪ್ರವಾಸೋದ್ಯಮ ಇಲಾಖೆ
ಮೈಸೂರು ರಾಜ್ಯಕ್ಕೆ ಕರ್ನಾಟಕ ನಾಮಕರಣ ಸುವರ್ಣ ಮಹೋತ್ಸವ
ಕರ್ನಾಟಕ ಸಂಭ್ರಮ-೫೦
ಮೈಸೂರು ರಾಜ್ಯಕ್ಕೆ ಕರ್ನಾಟಕ ರಾಜ್ಯವೆಂದು ನಾಮಕರಣವಾದ ನಿಮಿತ್ಯ 3ನೇ ನಂವೆಂಬರ್ 1973 ರಂದು ಹಂಪಿಯಿಂದ ಆಗಮಿಸಿದ ಕನ್ನಡ ಜ್ಯೋತಿಯನ್ನು ಸ್ವಾಗತಿಸಿ ಗದುಗಿನ ವೀರನಾರಾಯಣ ದೇವಾಲಯದಿಂದ ದಿ.ಕಾಟನ್ ಸೇಲ್ ಸೊಸೈಟಿವರೆಗೆ ತೆರೆದ ವಾಹನದಲ್ಲಿ ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ, ಮುಖ್ಯಮಂತ್ರಿಗಳಾದ ಶ್ರೀ ಡಿ. ದೇವರಾಜ ಅರಸ್, ಕೃಷಿ ಮತ್ತು ಅರಣ್ಯ ಸಚಿವರಾದ ಶ್ರೀ ಕೆ.ಎಚ್.ಪಾಟೀಲ, ಪೌರಾಡಳಿತ ಸಚಿವರಾದ ಶ್ರೀ ಡಿ.ಕೆ. ನಾಯ್ಕರ, ಕನ್ನಡ ಸಂಸ್ಕೃತಿ ಸಚಿವರಾದ ದೇವೆಂದ್ರಪ್ಪ ಘಾಳಪ್ಪ ಮತ್ತು ಇತರರು ಮೆರವಣಿಗೆ ಮೂಲಕ ಸ್ವಾಗತಿಸುತ್ತಿರುವುದು.
ಮೈಸೂರು ರಾಜ್ಯಕ್ಕೆ ಕರ್ನಾಟಕ ರಾಜ್ಯವೆಂದು ನಾಮಕರಣವಾದ ನಿಮಿತ್ಯ 3ನೇ ನಂವೆಂಬರ್ 1973 ರಂದು ಗದುಗಿನ ದಿ.ಕಾಟನ್ ಸೇಲ್ ಸೊಸೈಟಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಡಿ. ದೇವರಾಜ ಅರಸ್ ಮಾತನಾಡುತ್ತಿರುವುದು. ವೇದಿಕೆಯಲ್ಲಿ ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ, ಕೃಷಿ ಮತ್ತು ಅರಣ್ಯ ಸಚಿವರಾದ ಶ್ರೀ ಕೆ.ಎಚ್. ಪಾಟೀಲ, ಪೌರಾಡಳಿತ ಸಚಿವರಾದ ಶ್ರೀ ಡಿ.ಕೆ. ನಾಯ್ಕರ, ಕನ್ನಡ ಸಂಸ್ಕೃತಿ ಸಚಿವರಾದ ದೇವೆಂದ್ರಪ್ಪ ಘಾಳಪ್ಪ ಮತ್ತು ಇತರರು ಉಪಸ್ಥಿತರಿದ್ದರು.
ಮೆರವಣಿಗೆ
ದಿನಾಂಕ : 03-11-2023
ಬೆಳಿಗ್ಗೆ 9-30ಕ್ಕೆ
ಕನ್ನಡ ಜ್ಯೋತಿ ಸ್ವೀಕಾರ ಹಾಗೂ ತಾಯಿ ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ಮೂಲಕ ಕರ್ನಾಟಕ ಸಂಭ್ರಮ 50ರ ಮೆರವಣಿಗೆ ಶ್ರೀ ವೀರನಾರಾಯಣ ದೇವಸ್ಥಾನದಿಂದ ಆರಂಭವಾಗಿ ಜಾಮಿಯಾ ಮಸೀದಿ ಬಸವೇಶ್ವರ ವೃತ್ತ ಕೆ.ಎಚ್. ಪಾಟೀಲ ವೃತ್ತ ಪಂ.ಪುಟ್ಟರಾಜ ಗವಾಯಿಗಳ ವೃತ್ತ (ಭೂಮರಡ್ಡಿ ವೃತ್ತ) ಜನರಲ್ ಕಾರಿಯಪ್ಪ ವೃತ್ತದ ಮೂಲಕ ದಿ. ಕಾಟನ್ ಸೇಲ್ ಸೊಸೈಟಿಗೆ ತಲುಪಿ ಸಾರ್ವಜನಿಕ ಸಭೆ ನಡೆಯಲಿದೆ.
ಸಾರ್ವಜನಿಕ ಸಭೆ
ದಿನಾಂಕ : 03-11-2023
ಬೆಳಿಗ್ಗೆ 11-30ಕ್ಕೆ
1 ನವೆಂಬರ್ 2023 ಸಂಜೆ 6-00 ರಿಂದ
ಗದುಗಿನ ಶಾಲಾ ಮಕ್ಕಳಿಂದ ನೃತ್ಯರೂಪಕ
ಝಿ ಕನ್ನಡ ಕಾಮಿಡಿ ಕಿಲಾಡಿಗಳು ಕಲಾವಿದರಿಂದ ಕಾರ್ಯಕ್ರಮ
ಅಪ್ಪಣ್ಣ ರಾಮದುರ್ಗ
ವಾಣಿ
ಪ್ರವೀಣ ಗಸ್ತಿ
ಝೀ ಕನ್ನಡ ಸರಿಗಮಪ ಕಲಾವಿದರಿಂದ ಕನ್ನಡ ಚಿತ್ರಗೀತೆಗಳು
ಶ್ರೀರಾಮ ಕಾಸರ
ಶರಧಿ ಪಾಟೀಲ
ಕಂಬದ ರಂಗಯ್ಯ
ದಿಯಾ ಹೆಗಡೆ
2 ನವೆಂಬರ್ 2023 ಸಂಜೆ 6-00 ರಿಂದ
ಗದಗ ಜಿಲ್ಲೆಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ
ಟೀಂ ಎಕ್ಸ್‌ಟಿಸಿ ನೃತ್ಯ ಕಲಾತಂಡದಿಂದ ನೃತ್ಯ ವೈಭವ
ಅನನ್ಯ ಭಟ್ ತಂಡದವರಿಂದ ಕನ್ನಡ ಗೀತೆಗಳು
3 ನವೆಂಬರ್ 2023 ಸಂಜೆ 6-00 ರಿಂದ
ಪದ್ಮಶ್ರೀ ವೆಂಕಟೇಶಕುಮಾರ ಅವರಿಂದ ಹಿಂದೂಸ್ಥಾನಿ ಸಂಗೀತ
ಬೀಟ್ ಗುರೂಸ್ ತಂಡದವರಿಂದ ವಾದ್ಯ ಸಂಗೀತ
ಪ್ರಭಾತ್ ಕಲಾ ತಂಡದವರಿಂದ ಕರ್ನಾಟಕ ವೈಭವ ರೂಪಕ
ಖ್ಯಾತ ಹಿನ್ನೆಲೆ ಗಾಯಕ ಶ್ರೀ ವಿಜಯ ಪ್ರಕಾಶ ಅವರಿಂದ ಸಂಗೀತ
ಸರ್ವರಿಗೂ ಹಾರ್ದಿಕ ಸುಸ್ವಾಗತ
ದಿನಾಂಕ : ೧, ೨ ಮತ್ತು ೩ ನೆಯ ನವೆಂಬರ್ ೨೦೨೩
ಸ್ಥಳ: ದಿ. ಕಾಟನ್ ಸೇಲ್ ಸೊಸೈಟಿ ಆವರಣ, ಗದಗ




VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka